ವಿಷಯ: 95-96 ರಲ್ಲಿ ಸರ್ಕಾರದ ಬೊಕ್ಕಸಕ್ಕೆ ಸಂದಾಯವಾಗುವ ಹಣದ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:- 33 (446)

ಶ್ರೀ ಡಿ ಆರ್ ಪಾಟೀಲ್ (ಗದಗ್)

ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು, ಯೋಜನಾ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1995-96 ನೇ ಹಣಕಾಸು ವರ್ಷದಲ್ಲಿ ಸರಕಾರದ ಬೊಕ್ಕಸಕ್ಕೆ ಯಾವ ಯಾವ ಮೂಲಗಳಿಂದ ಎಷ್ಟು ಹಣ ಸಂದಾಯವಾಯಿತು?:- ಅನುಬಂಧ- 1 ರಲ್ಲಿ ಉತ್ತರ ನೀಡಲಾಗಿದೆ.

ಆ) ಇದು 1994-95 ನೇ ಸಾಲಿನಲ್ಲಿ ಜಮವಾದ ಹಣದ ಮೇಲೆ ಆದ ಪ್ರತಿಶತ ಹೆಚ್ಚಳ ಎಷ್ಟು?:- ಅನುಬಂಧ- 1 ರಲ್ಲಿ ಉತ್ತರ ನೀಡಲಾಗಿದೆ.

ಇ) 1995-96 ರ ಆಯವ್ಯಯದಲ್ಲಿ ಅಪೇಕ್ಷಿತ ಗುರಿಗಿಂತ ಹೆಚ್ಚಿನ ಆದಾಯವೇನಾದರೂ ಬಂದಿದ್ದರೆ ಆ ಬಗ್ಗೆ ಆದಾಯ ಮೂಲವಾರು ವಿವರ ನೀಡುವುದು?:- ಅಪೇಕ್ಷಿತ ಗುರಿಗಿಂತ ತೆರಿಗೆ ರಾಜಸ್ವ ಹೆಚ್ಚಿನದಾಗಿದೆ. ಈ ಅಂಕಿ ಅಂಶಗಳು ಮಹಾಲೇಖಪಾಲರು ಒದಗಿಸಿರುವ ಪ್ರಾಥಮಿಕ ಲೆಕ್ಕದ ರೀತ್ಯ ಇರುತ್ತವೆ. ಈ ಅಂಕಿ ಅಂಶಗಳು ಮಹಾಲೇಖಪಾಲರು ಲೆಕ್ಕಗಳನ್ನು ಅಂತಿಮಗೊಳಿಸುವಾಗ ಮಾಡಲಾಗುವ ಹೊಂದಾಣಿಕೆಗಳಿಂದ ವ್ಯತ್ಯಾಸವಾಗುವ ಸಾಧ್ಯತೆಯಿರುತ್ತದೆ.

ಶ್ರೀ ಸಿದ್ದರಾಮಯ್ಯ

(ಉಪ ಮುಖ್ಯಮಂತ್ರಿಗಳು)

ವಿಷಯ):- ರಾಷ್ಟ್ರೀಯ ಕ್ರೀಡೆಗಳ ಪ್ರಾಯೋಜಕರಿಗೆ ಆದಾಯ ತೆರಿಗೆ ವಿನಾಯಿತಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:- 34(349)

ಶ್ರೀರಾಮಲಿಂಗಾರೆಡ್ಡಿ(ಜಯನಗರ)

ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಷ್ಟ್ರೀಯ ಕ್ರೀಡೆಗಳು ಯಾವಾಗ ಪ್ರಾರಂಭವಾಗುವುದು:- 1996 ಡಿಸೆಂಬರ್ ತಿಂಗಳ ಎರಡನೇ ವಾರದಲ್ಲಿ ನಡೆಸಲು ಉದ್ದೇಶಿಸಲಾಗಿದೆ

ಆ) ರಾಷ್ಟ್ರೀಯ ಕ್ರೀಡೆಗಳಿಗೆ ಸಂಬಂಧಪಟ್ಟ ಹಾಗೆ ಎಷ್ಟು ಪ್ರಾಯೋಜಕರು ಮುಂದೆ ಬಂದಿದ್ದಾರೆ:- ರಾಷ್ಟ್ರೀಯ ಕ್ರೀಡೆಗಳಿಗೆ ಇದುವರೆವಿಗೆ ಒಬ್ಬರು ಪ್ರಾಯೋಜಕರು ಹಣ ನೀಡಿದ್ದಾರೆ.

ಇ) ಈ ಪ್ರಾಯೋಜಕರು ನೀಡುವ ಹಣಕ್ಕೆ ಆದಾಯ ತೆರಿಗೆ ವಿನಾಯಿತಿಯನ್ನು ನೀಡಬೇಕೆಂದು ರಾಜ್ಯ ಸರ್ಕಾರವು ಕೇಂದ್ರವನ್ನು ಕೋರಿದೆಯೇ:- ಹೌದು

ಈ) ಹಾಗಿದ್ದಲ್ಲಿ ಈ ಬಗ್ಗೆ ಕೇಂದ್ರ ಸರ್ಕಾರ ತನ್ನ ಒಪ್ಪಿಗೆಯನ್ನು ನೀಡಿದೆಯೆ:- ಇಲ್ಲ.

ಶ್ರೀ ಅಜಯಕುಮಾರ್ ಸರ್‌ನಾಯಕ

(ಯುವಜನ ಸೇವಾ ಹಾಗೂ ಕ್ರೀಡಾಗ ಸಚಿವರು)

ವಿಷಯ:- ಬೆಂಗಳೂರುನಲ್ಲಿರುವ ಲೋಕೋಪಯೋಗಿ ಇಲಾಖೆಯ ಸರ್ಕಾರಿ

ವಸತಿ ಗೃಹಗಳ ದುರಸ್ತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :- 35 (348)

ಶ್ರೀರಾಮಲಿಂಗರೆಡ್ಡಿ (ಜಯನಗರ)

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಬೆಂಗಳೂರು ನಗರದಲ್ಲಿ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ಸರ್ಕಾರಿ ನೌಕರರು ಹಾಗೂ ಅಧಿಕಾರಿಗಳ ವಸತಿ ಗೃಹಗಳ ಸಂಖ್ಯೆ ಎಷ್ಟು?:- ಬೆಂಗಳೂರಿನಲ್ಲಿ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ಸರ್ಕಾರಿ ವಸತಿ ಗೃಹಗಳ ಸಂಖ್ಯೆ : 1910

2. ಇವುಗಳ ಪೈಕಿ ಹಲವಾರು ವಸತಿ ಗೃಹಗಳು ಸೋರುತ್ತಿರುವ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?:- ಕೆಲವು ವಸತಿ ಗೃಹಗಳು ಸೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

3. ಹಾಗಿದ್ದಲ್ಲಿ, ಎಲ್ಲಾ ಸರ್ಕಾರಿ ವಸತಿ ಗೃಹಗಳನ್ನು ಪರಿಶೀಲಿಸಿ, ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?:- ಅಧಿಕಾರಿಗಳಿಂದ ಕಾಲ ಕಾಲಕ್ಕೆ ನಡೆಯುವ ಪರಿಶೀಲನೆಯ ನಂತರ ವಸತಿ ಗೃಹಗಳನ್ನು ಲಭ್ಯವಿರುವ ಅನುದಾನದಲ್ಲಿ ದುರಸ್ತಿ ಮಾಡಲಾಗುತ್ತಿದೆ.

ಶ್ರೀ ಸಿ.ಎಂ. ಉದಾಸಿ

(ಲೋಕೋಪಯೋಗಿ ಸಚಿವರು)

ವಿಷಯ:- ಹುಬ್ಬಳ್ಳಿ-ಧಾರವಾಡದ ಹೊರವಲಯದಲ್ಲಿ ಬೈಪಾಸ್ ರಸ್ತೆ ಕೆಲಸವನ್ನು ಪೂರ್ಣಗೊಳಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 36(344)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ)

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿ-ಧಾರವಾಡ ಹೊರ ವಲಯದಲ್ಲಿ ನಿರ್ಮಾಣವಾಗುತ್ತಿರುವ ಬೈಪಾಸ್ ರಸ್ತೆ ಕೆಲಸವನ್ನು 1996 ಮಾರ್ಚ್ ತಿಂಗಳ ಅಂತ್ಯದಲ್ಲಿ ಮುಕ್ತಾಯಗೊಳಿಸಿ ವಾಹನಗಳನ್ನು ಸದರಿ ರಸ್ತೆಯಲ್ಲಿ ಬಿಡಲಾಗುವುದು ಎಂದು ತಿಳಿಸಿರುವುದು ನಿಜವೇ:- ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆ ಮೊದಲನೇ ಹಂತ ಮಾರ್ಚ್ 1996 ರ ಅಂತ್ಯದಲ್ಲಿ ಪೂರೈಸಲಾಗುವುದು ಎಂದು ತಿಳಿಸಲಾಗಿತ್ತು.

ಆ) ಸದರಿ ರಸ್ತೆ ನಿರ್ಮಾಣ ಕೆಲಸ ಪೂರ್ಣಗೊಳಿಸಲಿಕ್ಕೆ ಸರ್ಕಾರವು ಕೈಗೊಂಡ ಕ್ರಮಗಳೇನು?:- ಮೆಟಲಿಂಗ್ ಕೆಲಸ ಬಹುತೇಕ ಮುಗಿದಿದ್ದು, ಡಾಂಬರೀಕರಣ ಕೈಗೊಳ್ಳಬೇಕಿದೆ.

ಇ) ಇನ್ನು ಎಷ್ಟು ಸಮಯದಲ್ಲಿ ಈ ರಸ್ತೆ ನಿರ್ಮಾಣ ಕೆಲಸ ಪೂರ್ಣಗೊಳ್ಳುವುದು:- ಹುಬ್ಬಳ್ಳಿ-ಧಾರವಾಡಕ್ಕೆ ಹೊರ ರಸ್ತೆ (ಮೊದಲ ಹಾಗೂ ಎರಡನೆ ಹಂತ) ಯನ್ನು ಖಾಸಗಿಯವರಿಂದ ಕೈಗೊಳ್ಳುವ ಬಗ್ಗೆ ಕೇಂದ್ರ ಸರ್ಕಾರವು ಪರಿಶೀಲಿಸುತ್ತಿದ್ದು, ಮೊದಲನೆ ಹಂತದ ಡಾಂಬರೀಕರಣದ